ಸಾಕ್ಷಿಯನ್ನು ದಿನಾಂಕ: 12-03-2020 ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ 3 ರಿಂದ 6 ನೇ ಪ್ರತಿವಾದಿ ಪರ ಶ್ರೀ ಎಂ ಎಂ ಜೆ ವಕೀಲರಿಂದಃ

ನನ್ನ ಗಂಡನ ಮನೆ ಕರ್ವಾ ಊರಿನ ಕೊಳಗದ್ದೆ . ಅದು ಸಿದ್ದಿವಿನಾಯಕ ದೇವಸ್ಥಾನದಿಂದ ಎಷ್ಟು ದೂರದಲ್ಲಿ ಇದೆ ಎಂದು ನನಗೆ ಗೊತ್ತಿಲ್ಲಾ . ಸದರಿ ದೇವಸ್ಥಾನಕ್ಕೆ ನಾನು ಹೋಗಿದ್ದೇನೆ . ಆ ದೇವಸ್ಥಾನದ ಚಾವಡಿಯಲ್ಲಿ ಆಂಗ್ಲ ಮಾಧ್ಯಮ ಶಾಲೆ ನಡೆಯುತ್ತಿತ್ತು ಎಂದರೆ ನನಗೆ ಗೊತ್ತಿಲ್ಲಾ . ಸದರಿ ದೇವಸ್ಥಾನದ ಬಳಿ ಪಡಿತರ ಅಂಗಡಿ ಇತ್ತು ಎಂದರೆ ಸರಿ . ನಾನು ಆ ಅಂಗಡಿಯಲ್ಲಿ ಯಾವತ್ತೂ ಪಡಿತರ ಪಡೆಯಲಿಲ್ಲಾ. ಸಾಕ್ಷಿ ಮುಂದುವರೆದು ಆ ಕಾಲದಲ್ಲಿ ಆ ವ್ಯವಸ್ಥೆ ಇರಲಿಲ್ಲಾ ಎನ್ನುತ್ತಾರೆ . ಶಾನಭೋಗರ ಕಚೇರಿ ಸದರಿ ದೇವಸ್ಥಾನದ ಹತ್ತಿರ ಇತ್ತು ಎಂದರೆ ಸರಿ . ನನಗೆ ಮಗಳು ಹುಟ್ಟಿದ ಬಗ್ಗೆ ಯಾವತ್ತೂ ನಾನು ಶಾನಭೋಗರಿಗೆ ತಿಳಿಸಿದ್ದು ಇಲ್ಲಾ . ನನಗೆ ಮಗಳು ಹುಟ್ಟಿದ ಬಗ್ಗೆ ನನ್ನ ಬಳಿ ಯಾವುದೇ ದಾಖಲೆ ಇಲ್ಲಾ ಎಂದರೆ ಸರಿ . ನಾನು ಹನುಮಂತ ಗೌಡ ( ನನ್ನ ಗಂಡ) ನ ಮನೆಯಲ್ಲಿ ವಾಸವಾಗಿದ್ದ ಬಗ್ಗೆ ಯಾವುದೇ ದಾಖಲೆ ಇಲ್ಲಾ ಎಂದರೆ ಸಾಕ್ಷಿಯು ನಾನು ಮದುವೆಯಾಗಿದ್ದೇ ದಾಖಲೆ ಇರುತ್ತದೆ . ನನ್ನ ಮದುವೆ ಹನುಮಂತ ಗೌಡನ ಜೊತೆ ಆಗಿದೆ ಎಂದು ಹೇಳಲು ಮದುವೆ ನೋಡಿದ ಯಾವುದೇ ಸಾಕ್ಷಿದಾರರುಇದ್ದಾರಾ ಎಂದರೆ ಇಲ್ಲಾ ಎಂದು ಸಾಕ್ಷಿ ಹೇಳುತ್ತಾರೆ ಮುಂದುವರೆದು ಅವರೇಲ್ಲರೂ ಸತ್ತು ಹೋಗಿದ್ದಾರೆ ಎನ್ನುತ್ತಾರೆ . ಹನುಮಂತ ಗೌಡನ ಜೊತೆ ನಾನು ಮದುವೆಯ ನಂತರ ಉಳಿದು ಬಂದಿದ್ದೇನೆ ಎಂದು ತೋರಿಸಲು ಯಾವುದೇ ಸಾಕ್ಷಿ ಇಲ್ಲಾ ಎಂದರೆ ನಾನು ಉಳಿದು ಬಂದಿದ್ದೇನೆ ಎನ್ನುತ್ತಾರೆ . ನೀವು ಹನುಮಂತ ಗೌಡರ ಮನೆಯಲ್ಲಿ ಉಳಿದ ಕೆಲಸಕ್ಕೆ ಹೋಗಿದ್ದೀರಾ ಎಂದರೆ ಸಾಕ್ಷಿಯು ಹೋಗಿದ್ದೇನೆ ಎನ್ನುತ್ತಾರೆ . ನಾನು ಗಣೇಶ ಹೆಗಡೆಯವರ ಮನೆಗೆ ಕೆಲಸಕ್ಕೆ ಹೋಗಿದ್ದೇನೆ . ಬೆಳ್ಳಿ ಮನೆ ಮತ್ತು ಹೆಬ್ಬಾರರ ಮನೆಗೆ ಕೆಲಸಕ್ಕೆ ಹೋಗುತ್ತಿದ್ದೇನು. ನಾನು ಈ ರೀತಿ ಮನೆ ಕೆಲಸಕ್ಕೆ ಹೋದ ಮನೆಯವರು ಯಾರೂ ಈಗ ಜೀವಂತ ಇರುವುದಿಲ್ಲಾ . ಅವರ ಮಕ್ಕಳುಗಳು ಜೀವಂತ ಇದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲಾ . ಸಾಕ್ಷಿ ಮುಂದುವರೆದು ಅವರ ಮಕ್ಕಳು ಜೀವಂತ ಇದ್ದಾರೆ ಎನ್ನುತ್ತಾರೆ . ಈ ರೀತಿ ಜೀವಂತ ಇದ್ದ ಒಬ್ಬ ಮಕ್ಕಳ ಹೆಸರನ್ನು ಸೂಚಿಸಬಹುದಾ ಎಂದರೆ ಇಲ್ಲಾ ಎಂದು ಸಾಕ್ಷಿ ಹೇಳುತ್ತಾರೆ .

ನನ್ನ ಮಗಳು ಸೀಮಾ ( 2 ನೇ ವಾದಿ ) ನನ್ನ ತಾಯಿ ಮನೆಯಲ್ಲಿ ಹುಟ್ಟಿದ್ದಾಳೆ . 2 ನೇ ವಾದಿಯ ಜನ್ಮ ದಾಖಲೆಯನ್ನು ನಾನು ಪಡೆದಿಲ್ಲಾ . ವೆಂಕಟ್ರಮಣ ನಾರಾಯಣ ಹೆಗಡೆಯವರ ಪರಿಚಯ ನನಗೆ ಇದೆ . ತಿಮ್ಮಣ್ಣ ಗಣೇಶ ಭಟ್ಟ ರವರ ಪರಿಚಯ ಸಹ ನನಗೆ ಇದೆ . 2 ನೇ ವಾದಿ 3 ನೇ ತರಗತಿಯವರೆಗೆ ಓದಿದ್ದಾಳೆ . ನನ್ನ ಗಂಡ ಹನುಮಂತ ಗೌಡ ಸತ್ತ ಇಸವಿ ನನಗೆ ಗೊತ್ತಿಲ್ಲಾ ಎಂದರೆ ಸರಿ . ನನ್ನ ಗಂಡ ಸಾಯುವ ಸ್ವಲ್ಪ ದಿನದ ಮೊದಲೆ ಅವರಿಗೆ ಮಾನಸಿಕ ಅಸ್ವಸ್ಥತೆ ಇತ್ತು ಎಂದರೆ ಸರಿಯಲ್ಲಾ . ನಾನು ಹನುಮಂತ ಗೌಡನ ಹೆಂಡತಿ ಎಂದು ಸುಳ್ಳು ಸಾಧನೆ ಮಾಡಲು ಹೊರಟಿದ್ದೇನೆ ಎಂದರೆ ಸರಿಯಲ್ಲಾ . ದಾವಾ ಆಸ್ತಿಗಳಲ್ಲಿ ಎಷ್ಟು ಮನೆ ಇದೆ ಎಂದರೆ ನನಗೆ ಗೊತ್ತಿಲ್ಲಾ . ದಾವಾ ಮಾಡುವ ಕಾಲಕ್ಕೆ ದಾವಾ ಸ್ಥಳದಲ್ಲಿ ಎಷ್ಟು ಮನೆ ಇದೆ ಎಂದು ನೀವು ನೋಡಿಕೊಂಡು ಬಂದಿದ್ದೀರಾ ಎಂದರೆ ಸಾಕ್ಷಿ ಉತ್ತರಿಸಿರುವುದಿಲ್ಲಾ . ದಾವಾ ಸ್ಥಳದಲ್ಲಿ 25 ಲಕ್ಷಕ್ಕೂ ಹೆಚ್ಚು ಮೊತ್ತದ ಮನೆಗಳು ಇವೆ ಎಂದರೆ ನನಗೆ ಗೊತ್ತಿಲ್ಲಾ .

ಪಾಟೀ ಸವಾಲಿಗೆ 1 ನೇ ಮತ್ತು 2 ನೇ ಪ್ರತಿವಾದಿ ಪರ ವಕೀಲರು ಸಮಯಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

Sd/–

ಪ್ರಧಾನ ಸಿವಿಲ್ ನ್ಯಾಯಾಧೀಶರು, ಹೊನ್ನಾವರ.